# ಕೂಡ್ಲಿಗಿ ನೋಡ್ ಬರ್ರೀ

ಹಸಿರು ಸೆರಗ್‌ನ್ಯಾಗ ಕೂಡ್ಲಿಗಿ ಕೇರಿಗಳು ಕಂಗೊಳ್‌ಸ್ತಾವು. ಇಲ್ಲಿ ಐತಿಹ್ಯ ಹೊಂದಿರೋ ದೇವಸ್ಥಾನಗಳು ತುಂಬ್ಯಾವು. ಕೆರಿ ಕೋಡಿ ಬಿದ್ರ ನೋಡಾಕ ಒಂದ್ ಹಬ್ಬ. ಆಧ್ಯಾತ್ಮಿಕ, ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಕೇಂದ್ರ ಆಗೈತಿ ನಮ್ ಕೂಡ್ಲಿಗಿ. ನಮ್ ಊರಾಗ ಇನ್ನೂ ಏನೇನ್ ವಿಶೇಷ ಐತಿ ಅಂತ್ ಹೇಳ್ತೀನಿ ಕೇಳ್ರಿ...

■ ದೀಪಶ್ರೀ ಎಸ್. ಕೂಡ್ಲಿಗಿ



ನಮ್ ಊರು ಕೂಡ್ಲಿಗಿ ತಾಲ್ಲೂಕ. ಎಷ್ಟೋ ಜನಕ್ಕಾ ಕೂಡ್ಲಿಗಿ ಎಲ್ಲೈತಂತ ಗೊತ್ತಿಲ್ಲ. ಕೂಡ್ಲಿಗಿ ಹೊಸ ವಿಜಯನಗರ ಜಿಲ್ಲ್ಯಾಗ ಬರ್ತತಿ. ತಾಲ್ಲೂಕ ಅಂದ್ ಮಾತ್ರಕ್ಕ ಮೂಗ್ ಮುರಿಬ್ಯಾಡ್ರಿ. ನಮ್ ಊರಾಗ ಏನೇನ್ ವಿಶೇಷ ಐತಿ ಅಂತ್ ಹೇಳ್ತೀನಿ ಕೇಳ್ರಿ. ತುಸು ಟೈಮ್ ಮಾಡ್ಕೊಂಡ್ ಓದ್ರಿ.

ಕೂಡ್ಲಿಗಿ ತಾಲ್ಲೂಕಿನ ಹಿಂದಿನ್ ಹೆಸ್ರು ಕೂಡಲಿಗಿ ಆಗಿತ್ತ್. ಹದ್ನಾರು, ಹದ್ನೇಳ್‌ನೇ ಶತಮಾನದಾಗ, ಜರ್ಮಲಿ, ಗುಡೆಕೋಟೆ, ಬೀರಲುಗುಡ್ಡ, ಹರಪನ್ ಹಳ್ಳಿ ಪಾಳೇಗಾರರು ಮತ್ತಾ ಹಂಪಿ ಅರಸು ಮನೆತನ್‌ಗಳು ಕೂಡಲಿಗಿಗ ಸೇರುತ್ತಿದ್ರು. ಹೀಂಗಾಗಿ ಪಾಳೇಗಾರರು ಸೇರ್‍ರೊ ಸ್ಥಳನ ಕೂಡಲಿಗಿ ಅಂತ ಕರೆಯುತ್ತಿದ್ರು. ಇವ್ರು ಸೇರೂ ಸ್ಥಳನ ಕೂಡಲಿಗಿ ಅಂತ ಕರಿಯೋ ಪ್ರತೀತಿ ಇತ್ತು. ಸೇರುವ ಜಾಗಕ್ಕ ಕೂಡದು. ಕೂಡಲಿಗಿ ಅನ್ನೋದಾಗಿತ್ತು. ಕಾಲಾಂತರದಾಗ, ಆಧುನಿಕವಾಗಿ ಕೂಡಲಿಗಿ ಅನ್ನೊ ಪದ ಕೂಡ್ಲಿಗಿ ಅಂತಾ ಜನ್ರ ಮಾತಾತು.

ಹಂಪ್ಯಾಗ ಇರೋ ಕಲ್ಲಿನ್ ರಥದ ಮಾದ್ರಿ ನಮ್ ಊರಗೈತಿ. ಈ ಕಲ್ಲಿನ್ ರಥನ್ನ ಮೀಟಿದ್ರ ಸ್ವರ ಹೊಂಡ್ತತಿ. ಕಲ್ಲಿನ ರಥ ಆದಿಕೇಶವನ ಗುಡ್ಯಾಗ ಕಾಣ್ ಬೋದು. ಇದ್ನ ವಿಜಯನಗರ ಅರಸ್ರ ಕಾಲದ್ ಅಂತಾರ.

ಹಿಂದೆ ಜನ್ರು ಅಡ್ವಿಗ್ ಹೊಂಟಾಗ ದಾರ್ಯಾಗ ಹೊಟ್ಟೆ ಹಸ್ವು ಆದ್ರ ಅಡ್ವ್ಯಾಗ ಸಿಗೋ ಕೌಳಿ ಹಣ್ಣ್ ತಿಂತಿದ್ರು. ಕೌಳಿ, ಕಾರಿ, ಬಿಕ್ಕಿ ಹಣ್ಣಾಗ ಔಷ್ಧಿ ಗುಣನು ಐತಿ ನೋಡ್ರಿ. ಕೌಳಿ ಹಣ್ಣ್ನ ಕರಿದ್ರಾಕ್ಷಿನು ಅಂತಾರ, ರುಚ್ಯಾಗ ಒಂದಕ್ಕೊಂದು ಹೊಲ್ತಾತಿ. ಈ ಹಣ್ಣಿನ್ ಸೀಸನ್ ಆಗಸ್ಟ್ ತಿಂಗಳು.

ಸುಕ್ಲಮ್ಮ ದೇವಿ ಜಾತ್ರ್ಯಾಗ ಊರಿನ್ ಜನ ಮನಿ ಕಸ ಸತಿಗೂ ಅನ್ನಂಗಿಲ್ಲ. ತಲೆಮಾರಿನ್ ಪದ್ಧತಿ ಹಂಗಾ ಮನಿ ಖಾಲಿ ಮಾಡ್ತಾರ. ಪ್ರಾಣಿ, ಪಕ್ಷಿನ್ನ, ತೊಟ್ಲಾಗ ಇರೋ ಕೂಸು, ಮನಿ ಮುಂದಿರೋ ಮುದ್ಕಿನ್ನ ಸತಿಗೂ ಹೊಂಡ್ಕ್ಯಾಂಡ್ ಹೋಗ್ತಾರಾ. ಮೂರ್ ವರ್ಷಕ್ಕ ಒಂದ್ ಸಲ ಬರೋ ಈ ಜಾತ್ರ್ಯಾಗ ಊರ್ ಹೋರ್ಗ ಟೆಂಟ್ ಹಾಕ್ಯಾಂಡ್ ಬಂಧು ಬಳ್ಗ್ ದೂರ್ ಸೇರ್ಕಂಡ್ ಹೊಳ್ಗಿ, ಕರಿ ಮಾಡ್ಕ್ಯಾಂಡ್ ಉಂತಾರ. ಸಂಜಿ ವಾಪಸ್ ಮನಿಗೆ ಬರ್ತಾರಾ. ಅಂದಂಗ ಊರಿಗೆ ಯಾವ್ ಬ್ಯಾನಿ ಬರ್ಬಾದು ಅಂತ ಈ ಹಬ್ಬ ಮಾಡ್ತಾರ.

ಹೆಳವನ ಬಗ್ಗೆ ಗೊತ್ತೇನ್ರಿ ಊರೂರು ತಿರುಗ್ತ ಕುಟುಂಬದ್, ವಂಶ, ತಲೆಮಾರಿನ್ ಇತಿಹಾಸದ ಬಗ್ಗೆ ಹೇಳ್ತಾರ. ಅವರಿಗೆ ಉಡುಗೊರೆಯಾಗಿ ಕಾಳು, ಕಡಿ, ದವಸ, ಧಾನ್ಯ, ಹತ್ತ್ ಇಪ್ಪತ್ ರೂಪಾಯಿ ಕೊಟ್ರಾ ಸಾಕು ಫುಲ್ ಖುಷ್ ಆಗ್ತಾರ.

ಆದಿಮ ಜನ್ರು ಸತ್ತಾಗ ಶವಸಂಸ್ಕಾರ ಮಾಡ್ತಿದ್ರು. ಇದ್ನ ಕಿಂಡಿ ಕೋಣೆ ಸಮಾಧಿ ಅಂತ

